**Code No. 20 X**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

## (ವೇಗ)

ಜೂನ್, 2016

ವೇಳೆ { ಉಕ್ತಲೇಖನ : 10 ನಿಮಿಷಗಳು
ಲಿಪಿ ಬರಹ : 1 ಗಂಟೆ 30 ನಿಮಿಷಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರು (200) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಧ್ಯಕ್ಷರೇ,

ಕರ್ನಾಟಕ ಸರ್ಕಾರದ ಈ ಪ್ರಸಕ್ತ
ಸಾಲಿನ ಮುಂಗಡ ಪತ್ರವನ್ನು ಮಂಡಿಸಲು
ನಾನು ಹರ್ಷಿಸುತ್ತೇನೆ. ರಾಜ್ಯದ ಜನತೆಯ
1/4 ಆಶೀ/ರ್ವಾದದಿಂದ ಸತತ ನಾಲ್ಕು ಬಾರಿ
ಮುಂಗಡ ಪತ್ರ ಮಂಡಿಸುವ ಅವಕಾಶ ನನಗೆ
ದೊರೆತಿದೆ. ಈ ಅವಕಾಶವಿತ್ತ ಜನತೆಗೆ ನಾನು
1/2 ಋಣಿಯಾಗಿದ್ದೇನೆ./ ಕರ್ನಾಟಕದ ಜನತೆಯ
ಆಶಯದಂತೆ ಜನಾದೇಶವನ್ನು ಅಭಿವೃದ್ಧಿಯ
ವೇಗ ಮತ್ತು ವಿಸ್ತಾರವನ್ನು ಹೆಚ್ಚಿಸಲು ಬಳಕೆ
3/4 ಮಾಡಿಕೊಳ್ಳಲು ಪ್ರಾಮಾಣಿಕ/ ಪ್ರಯತ್ನ
ಮಾಡುವುದಾಗಿ ನಾಡಿನ ಜನತೆಗೆ ಭರವಸೆ
ನೀಡುತ್ತೇನೆ. ಮಹಾತ್ಮ ಗಾಂಧೀಜಿಯವರು
ಅಮೃತ ಬಜಾರ್ ಪತ್ರಿಕೆಯ ತಮ್ಮ
ಲೇಖನದಲ್ಲಿX ಸರ್ವರನ್ನೂ ಸಮಾನವಾಗಿ 1
ಪರಿಭಾವಿಸಿ ಎಲ್ಲರ ಅಭ್ಯುದಯಕ್ಕೆ
ಶ್ರಮಿಸುವ ಸಂಕಲ್ಪ ತೊಡಲು ಹೇಳಿದ್ದು, ಈ
ದಿಶೆಯಲ್ಲಿ ದಿಟ್ಟ ಹೆಜ್ಜೆಯನ್ನಿರಿಸಿದ್ದೇನೆ./ ನಮ್ಮ 1/4
ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ
ಇಲ್ಲಿಯವರೆಗೆ ಹಲವು ಕಠಿಣ ಸವಾಲುಗಳು
ಎದುರಾಗಿವೆ. ಅವುಗಳನ್ನು ಪರಿಹರಿಸಿಕೊಂಡು
ಯ/ಶಸ್ವಿಯಾಗಿ ಮುನ್ನಡೆದಿದ್ದೇವೆ. ರಾಜ್ಯದಲ್ಲಿ 1/2
ರಸಾಯನಿಕ ಗೊಬ್ಬರಗಳ ತೀವ್ರ ಅಭಾವ
ನಾವು ಎದುರಿಸಿದ ಮೊದಲ ಸವಾಲು.

$\frac{3}{4}$ ಈ ಕೊರತೆಗೆ ನಾವು ಕಾ/ರಣರಲ್ಲವಾದರೂ
ಸಮಸ್ಯೆ ಬಗೆಹರಿಸುವ ಜವಾಬ್ದಾರಿಯಿಂದ
ನುಣುಚಿಕೊಳ್ಳದೆ, ಪರ್ಯಾಯ ವ್ಯವಸ್ಥೆಗೆ
ವಿಶೇಷ ಕ್ರಮಗಳನ್ನು ಕೈಗೊಂಡ ತೃಪ್ತಿ
2 ನಮ್ಮXದು. ರೈತರ ಹೆಸರಿನಲ್ಲಿ ಪ್ರಮಾಣ
ವಚನ ಸ್ವೀಕರಿಸಿದ ನಾನು ರೈತರ ಹಿತರಕ್ಷಣೆಗೆ
ಎಂದೂ ಹಿಂದೆ-ಮುಂದೆ ನೋಡಿಲ್ಲ.
$\frac{1}{4}$ ಮುಂಗಾರು ವೈಫಲ್ಯ ಸೃಷ್ಟಿಸಿದ/ ಅಭಾವ
ಪರಿಸ್ಥಿತಿ ನಾವು ಎದುರಿಸಿದ ಮತ್ತೊಂದು ದೊಡ್ಡ
ಸವಾಲು. ಸೂಕ್ತ ಪರಿಹಾರ-ಕಾಮಗಾರಿಗಳ
ಮೂಲಕ ಈ ಸವಾಲಿಗೆ ಸಮರ್ಥ ಉತ್ತರ
$\frac{1}{2}$ ಕಂಡು/ಕೊಂಡೆವು. ತಡವಾಗಿಯಾದರೂ
ವರುಣದೇವ ಕೃಪೆ ತೋರಿದ್ದರಿಂದ, ರೈತರು ಈ
ವರ್ಷ ಸಮೃದ್ಧ ಎನ್ನದಿದ್ದರೂ ಸಾಧಾರಣವಾದ
$\frac{3}{4}$ ಫಸಲನ್ನು ಬೆಳೆಯಲು ಸಾ/ಧ್ಯವಾಗಿದೆ. ಪಶ್ಚಿಮ
ಘಟ್ಟಗಳ ಪ್ರದೇಶಗಳಲ್ಲಿ ಮಳೆಯ ತೀವ್ರ
ಕೊರತೆಯಿಂದಾಗಿ ಜಲಾಶಯಗಳಲ್ಲಿ ಸಾಕಷ್ಟು
3 ನೀರು ಸಂಗ್ರಹವಾಗದೆ ಜಲ ವಿದ್ಯುತ್X
ಉತ್ಪಾದನೆಯಲ್ಲಿ ತೀವ್ರ ಕೊರತೆ ಉಂಟಾಗಿದೆ.
ಈ ಕೊರತೆಯನ್ನು ನೀಗಿಸಲು ರಾಜ್ಯ ಸರ್ಕಾರ
ಹೊರ ರಾಜ್ಯಗಳಿಂದ ಮತ್ತು ಖಾಸಗಿ
$\frac{1}{4}$ ಮೂಲಗಳಿಂದ ವಿದ್ಯು/ಚ್ಛಕ್ತಿ ಖರೀದಿಸುವ
ಅನಿವಾರ್ಯ ಒತ್ತಡಕ್ಕೆ ಒಳಗಾಯಿತು. ಈ
ಉದ್ದೇಶಕ್ಕೆ ಅಗತ್ಯ ಹೆಚ್ಚುವರಿ ಹಣಕಾಸನ್ನು
ಒದಗಿಸಿಕೊಂಡು ವಿದ್ಯುತ್ ಸರಬರಾ/ಜು $\frac{1}{2}$
ಏರುಪೇರಾಗದಂತೆ ನೋಡಿಕೊಳ್ಳಲಾಗಿದೆ.
ಇಂತಹ ಸಮಸ್ಯೆಗಳ ನಡುವೆಯೂ ರಾಜ್ಯದ
ಅಭಿವೃದ್ಧಿ ಯೋಜನೆಗಳಿಗೆ ಸಂಪನ್ಮೂಲದ
ಕೊರತೆಯಾಗ/ದಂತೆ ಎಚ್ಚರದಿಂದ $\frac{3}{4}$
ಕಾರ್ಯನಿರ್ವಹಿಸುವ ಮೂಲಕ ಸರ್ಕಾರ
ಜನತೆಯ ವಿಶ್ವಾಸಕ್ಕೆ ಪಾತ್ರವಾಗಿದೆ ಎಂದು
ಹೇಳಲು ಅಭಿಮಾನಪಡುತ್ತೇನೆ. ಪ್ರತಿ
ನೂರುX ದಿನಗಳಿಗೊಮ್ಮೆ ಜನತೆಯ ಮುಂದೆ 4
ಯೋಜನೆ ಮತ್ತು ಸಾಧನೆ ಬಗ್ಗೆ ವಿವರವಾದ
ವರದಿಯನ್ನು ಮಂಡಿಸುವ ವಿಶಿಷ್ಟ
ಪದ್ಧತಿಯನ್ನು ನಾವು ಪ್ರಾರಂಭಿಸಿದ್ದೇವೆ./ $\frac{1}{4}$
ಎರಡನೇ ಶನಿವಾರ ಹೊರತುಪಡಿಸಿ ಪ್ರತಿ
ಶನಿವಾರದಂದು ಹೋಬಳಿ ಮಟ್ಟದಲ್ಲಿ
"ಜನಸ್ಪಂದನ" ಕಾರ್ಯಕ್ರಮ ಆಯೋಜಿಸುವ
ಮೂಲಕ ಆಡ/ಳಿತ ಯಂತ್ರವನ್ನು ಜನರ $\frac{1}{2}$
ಮನೆ ಬಾಗಿಲಿಗೆ ಕೊಂಡೊಯ್ದು ಸಮಸ್ಯೆಗಳ
ನಿವಾರಣೆಗೆ ಸ್ಪಂದಿಸಿದ್ದೇವೆ. ಈ
ಕಾರ್ಯಕ್ರಮವನ್ನು ಮತ್ತಷ್ಟು ಬಲಪಡಿಸಲು
ನಾವು/ ಬದ್ಧರಾಗಿದ್ದೇವೆ. ರಾಜ್ಯದ $\frac{3}{4}$

ಸರ್ವತೋಮುಖ ಅಭಿವೃದ್ಧಿ ಮತ್ತು ಜನರ
ಸಮಸ್ಯೆಗಳ ನಿವಾರಣೆಯ ದಿಕ್ಕಿನಲ್ಲಿ ಆಡಳಿತ
5 ಯಂತ್ರವನ್ನು ಮುನ್ನಡೆಸಿದ್ದು ಈX
ಪ್ರಯತ್ನದಲ್ಲಿ ಮತ್ತಷ್ಟು ಸುಧಾರಣೆ ಹಾಗೂ
ದಕ್ಷತೆ ತರಲು ಸರ್ಕಾರ ವಿಶೇಷ
ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು
$\frac{1}{4}$ ತಿಳಿಸಲು ಇಚ್ಛಿಸು/ತ್ತೇನೆ. ಕಳೆದ ಆರು
ತಿಂಗಳುಗಳಲ್ಲಿ ರಾಜ್ಯದಾದ್ಯಂತ ನಡೆಸಿದ
ಜನಸ್ಪಂದನ ಕಾರ್ಯಕ್ರಮಗಳಲ್ಲಿ ಜನರ
$\frac{1}{2}$ ಕುಂದುಕೊರತೆಗಳ ಬಗ್ಗೆ 6 ಲಕ್ಷ ಮನ/ವಿಗಳನ್ನು
ಸ್ವೀಕರಿಸಿ 5 ಲಕ್ಷ ಮನವಿಗಳನ್ನು ಇತ್ಯರ್ಥ
ಮಾಡಿರುವುದು ಅಪೂರ್ವ ದಾಖಲೆಯೆಂದು
ತಿಳಿಸಲು ಸಂತೋಷಿಸುತ್ತೇನೆ. ಮುಂದಿನ
$\frac{3}{4}$ ದಿನಗಳ/ಲ್ಲಿ ಈ ಜನಪ್ರಿಯ ಕಾರ್ಯಕ್ರಮವನ್ನು
ವಿಸ್ತರಿಸಿ ಗ್ರಾಮಮಟ್ಟದ ಯೋಜನೆಗಳ
ಅನುಷ್ಠಾನ, ಕಾಮಗಾರಿಗಳ ತಪಾಸಣೆ,
6 ಹಾಗೂ ಅಂಗವಾನಡಿ ಆಸ್ಪತ್ರೆ/ಗಳಂತಹ
ಸರ್ಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯ
ಮೇಲ್ವಿಚಾರಣೆಗೂ ಸಹಾಯಕವಾಗುವಂತೆ
ಕ್ರಮತೆಗೆದುಕೊಳ್ಳಲಾಗುವುದು. ಈ ಸಾಲಿನ
$\frac{1}{4}$ ಮುಂಗಡ/ ಪತ್ರದ ವಿವರಗಳನ್ನು
ಸಾದರಪಡಿಸುವ ಮುನ್ನ ಸದ್ಯದ ಆರ್ಥಿಕ
ಪರಿಸ್ಥಿತಿಯ ಹಿನ್ನೆಲೆಯನ್ನು ಸ್ಥೂಲವಾಗಿ
ವಿವರಿಸಲು ಇಚ್ಛಿಸುತ್ತೇನೆ. ನಮ್ಮ/ ದೇಶದ $\frac{1}{2}$
ಹಣಕಾಸಿನ ಮಾರುಕಟ್ಟೆಯಲ್ಲಿ ತೊಡಗಿಸಿದ್ದ
ವಿದೇಶಿ ಹೂಡಿಕೆಯನ್ನು ಗಣನೀಯ
ಪ್ರಮಾಣದಲ್ಲಿ ಹಿಂತೆಗೆದುಕೊಂಡ
ಪರಿಣಾಮವಾಗಿ ನಮ್ಮ/ ಹಣಕಾಸಿನ $\frac{3}{4}$
ಮಾರುಕಟ್ಟೆ ಕುಸಿದಿದೆ. ಇದಕ್ಕಾಗಿ ಹಣದುಬ್ಬರದ
ಪರಿಸ್ಥಿತಿ ನಿಯಂತ್ರಿಸಲು ಬಿಗಿ ಹಣಕಾಸಿನ
ನೀತಿ ಬದಲಾಯಿಸಬೇಕಾಗಿದೆ.X 7

ಮಾನ್ಯರೇ,

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ
ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರ
ವತಿಯಿಂದ ನಡೆಸುವ ವಾಣಿಜ್ಯ ಪರೀಕ್ಷೆಗೆ
ನಿಮ್ಮನ್ನು ಪ್ರಶ್ನೆಪ/ತ್ರಿಕೆ ತಯಾರಕರನ್ನಾಗಿ $\frac{1}{4}$
ನೇಮಕ ಮಾಡಲಾಗಿದೆಯೆಂದು ತಿಳಿಸಲು
ಹರ್ಷಿಸುತ್ತೇನೆ. ತಾವು ಕನ್ನಡ ಶೀಘ್ರಲಿಪಿ
ವಿಷಯದ ಪ್ರಥಮ ದರ್ಜೆಗೆ ಸಂಬಂಧ/ಪಟ್ಟ $\frac{1}{2}$
ಮಾದರಿ ಉತ್ತರ ಪತ್ರಿಕೆಗಳನ್ನು ಮಂಡಳಿಯ
ನಿಯಮಾನುಸಾರ ತಯಾರಿಸಬೇಕಾಗಿರುತ್ತದೆ,
ನೀವು ಪ್ರಶ್ನೆಪತ್ರಿ/ಕೆಯನ್ನು ತಯಾರಿಸಲು $\frac{3}{4}$
ಮಂಡಳಿಯ ನಿಯಮಗಳಿಗೆ ಬದ್ಧರಾಗಿರಬೇಕು
ಮತ್ತು ಸದರಿ ವಿಷಯದಲ್ಲಿ ಗೌಪ್ಯತೆಯನ್ನು
ಕಾಪಾಡುವುದು ತಮ್ಮ ಆದ್ಯ ಕXರ್ತವ್ಯವಾಗಿದೆ. 8

ಪ್ರಶ್ನೆಪತ್ರಿಕೆ ತಯಾರಕರು ಮಂಡಳಿಯ
ನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು
ಇತರೆ ಭತ್ಯೆಗಳಿಗೆ ಅರ್ಹರಾಗಿರುತ್ತಾರೆ ಹಾಗೂ
$\frac{1}{4}$ ಅ/ವರು ಕಡ್ಡಾಯವಾಗಿ ಮಂಡಳಿಯು
ನಡೆಸುವ ಪ್ರಶ್ನೆ ಪತ್ರಿಕೆ ತಯಾರಕರ ಸಭೆಗಳಿಗೆ
ಹಾಜರಾಗಿ ಕಡ್ಡಾಯವಾಗಿ ಸ್ಥಳದಲ್ಲಿಯೇ ಪ್ರಶ್ನೆ
$\frac{1}{2}$ ಪತ್ರಿಕೆ/ಗಳನ್ನು ಸಿದ್ಧಪಡಿಸಬೇಕಾಗಿರುತ್ತದೆ.
ವಿಷಯವಾರು ಮುಖ್ಯಸ್ಥರ ಹಾಗೂ ಪ್ರಶ್ನೆಪತ್ರಿಕೆ
ತಯಾರಕರ ಆಯ್ಕೆಯನ್ನು ಈಗಾಗಲೇ
$\frac{3}{4}$ ನಿರ್ಣಯಿಸಲಾಗಿದ್ದು, ನೀ/ವು ನಿಮ್ಮ ವಿಷಯ
ಮುಖ್ಯಸ್ಥರೊಂದಿಗೆ ಚರ್ಚಿಸಿ ಪ್ರಶ್ನೆಪತ್ರಿಕೆಯನ್ನು
ತಯಾರಿಸತಕ್ಕದ್ದು. ಪ್ರಶ್ನೆಪತ್ರಿಕೆ ತಯಾರಿಕೆಗೆ
9 ಸಂಬಂಧಿಸಿದಂತೆ ಅವಶ್ಯವಿರುXವ ಬಿಳಿಯ
ಕವರ್ಸ್, ಎ4 ಸೈಜ್ ಪೇಪರ್ ಇತ್ಯಾದಿಗಳನ್ನು
ಮಂಡಳಿಯಿಂದ ಒದಗಿಸಲಾಗುವುದು.
ಪ್ರಶ್ನೆಪತ್ರಿಕೆ ತಯಾರಿಕೆ ಸಂದರ್ಭದಲ್ಲಿ
ವಿಷ/ಯ ಮತ್ತು ಸಂಕೇತಗಳನ್ನು ನಮೂದಿಸಬೇಕು. $\frac{1}{4}$
ಆನಂತರ ನೀವು ತಯಾರಿಸಿದ
ಪ್ರಶ್ನೆಪತ್ರಿಕೆಗಳನ್ನು ಮತ್ತೊಮ್ಮೆ ಪರಿಶೀಲಿಸಿ,
ವಿಷಯವಾರು ನೇಮಕ ಮಾ/ಡಿರುವ $\frac{1}{2}$
ಮುಖ್ಯಸ್ಥರಿಂದ ಅನುಮೋದನೆ ಪಡೆಯುವುದು.
ಅನುಮೋದನೆ ನಂತರ ಸಭೆಯಲ್ಲಿ ಸೂಚಿಸಿದ
ಸಂಖ್ಯೆಯ ಸೆಟ್‌ಗಳ ಪ್ರಶ್ನೆಪತ್ರಿಕೆ ಹಾಗೂ
ಮಾದ/ರಿ ಉತ್ತರ ಪತ್ರಿಕೆಗಳನ್ನು ನಿರ್ದೇಶಕರು $\frac{3}{4}$
(ಇತರೆ ಪರೀಕ್ಷೆಗಳು) ರವರಿಗೆ ಪರಿಶೀಲನೆಗಾಗಿ
ಒಪ್ಪಿಸುವುದು.

ತಮ್ಮ ನಂಬುಗೆಯ,

ನಿರ್ದೇಶಕರು. X 10